ಕರ್ನಾಟಕ ಸರ್ಕಾರ

ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ:ರಾಸೇಯೋ:ಪಪೂಶಿ/01/2019-20

ನಿರ್ದೇಶಕರಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18 ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ:09/11/.2020.

## ಜ್ಞಾಪನ

ವಿಷಯ:- 2019-20ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ರಾಷ್ಟ್ರರಾಜ್ಯ ಪ್ರಶಸ್ತಿಗಳಿಗಾಗಿ ಮತ್ತು ನಿರ್ದೇಶಾಲಯ ಪ್ರಸ್ತಾವನೆಗಳನ್ನು ಆಹ್ವಾನಿಸುತ್ತಿರುವ ಬಗ್ಗೆ.

ಉಲ್ಲೇಖ-: ಯುಸೇಇ/ರಾಸೇಯೋ/54/2020-21/199 ದಿನಾಂಕ:07/11/2020.

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ 2019-20ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯಇಂದಿರಾಗಾಂಧಿರಾಷ್ಟ್ರೀಯ ಪ್ರಶಸ್ತಿ /ರಾಜ್ಯಮಟ್ಟದ/ನಿರ್ದೇಶನಾಲಯಪ್ರಶಸ್ತಿಗಾಗಿ ಎನ್.ಎಸ್.ಎಸ್ ಘಟಕಗಳುಳ್ಳ ಪದವಿ ಪೂರ್ವ ಕಾಲೇಜುಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಕಾಲೇಜಿನ ಪ್ರಾಂಸುಪಾಲರು/ಕಾರ್ಯಕ್ರಮಾಧಿಕಾರಿಗಳು /ಸ್ವಯಂ ಸೇವಕರು-ಸ್ವಯಂಸೇವಕಿಯರು ನಿಗದಿತ ನಮೂನೆಗಳಲ್ಲಿ ಪ್ರಶಸ್ತಿಗಳಿಗಾಗಿ ಪ್ರಸ್ತಾವನೆಗಳನ್ನು ದಿನಾಂಕ:25/11/2020ರ ಒಳಗಾಗಿ ಕೇಂದ್ರಕಛೇರಿ, ಎನ್.ಎಸ್.ಎಸ್ ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560012.ಇಲ್ಲಿಗೆ ಮುದ್ದಾಂ ಆಗಿ ಅಥವಾ ನೊಂದಾಯಿತ ಅಂಚೆ ಮೂಲಕ ಕಳುಹಿಸಲು ಕೋರಿದೆ. ದಿನಾಂಕ:26/11/2020ರ ನಂತರ ಬರುವ ಮತ್ತುಅಪೂರ್ಣ ಮಾಹಿತಿಇರುವಯಾವುದೆ ಪ್ರಸ್ತಾವನೆಗಳನ್ನು ಪ್ರಶಸ್ತಿಗಳಿಗಾಗಿ ಪರಿಗಣಿಸಲಾಗುವುದಿಲ್ಲ.

ರಾಜ್ಯ ಪ್ರಶಸ್ತಿಗಳಾದ ಅತ್ಯುತ್ತಮಘಟಕ, ಅತ್ಯುತ್ತಮಕಾರ್ಯಕ್ರಮಅಧಿಕಾರಿ ಮತ್ತುಅತ್ಯುತ್ತಮ ಸ್ವಯಂ ಸೇವಕ/ಸ್ವಯಂ ಸೇವಕಿಯರಆಯ್ಕೆಗಾಗಿ ದಿನಾಂಕ:25/11/2020 ರೊಳಗೆ ಈ ಕೆಳಗಿನ ನಿಬಂದನೆಗಳಿಗೆ ಒಳಪಟ್ಟು ಪ್ರಸ್ತಾವನೆಗಳನ್ನು ಕಳುಹಿಸಿಕೊಡಲು ಸೂಚಿಸಿದೆ.

1. ಇಂದಿರಾಗಾಂಧಿರಾಷ್ಟ್ರೀಯ ಪ್ರಶಸ್ತಿ ಮತ್ತುರಾಜ್ಯ ಪ್ರಶಸ್ತಿಗಳಿಗೆ ನಿರ್ದೇಶಾಲಯಒಂದೇರೀತಿಯ ಪ್ರಸ್ತಾವನೆಗಳಾದರೂ ಪ್ರತ್ಯೇಕ ಪ್ರಸ್ತಾವನೆಗಳನ್ನು ಸಲ್ಲಿಸಿ. ಪ್ರಸ್ತಾವನೆಯಾವ ಪ್ರಶಸ್ತಿಗೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕು.
2. ಇಂದಿರಾಗಾಂಧಿರಾಷ್ಟ್ರೀಯ ಪ್ರಶಸ್ತಿ ಮತ್ತುರಾಜ್ಯ ಪ್ರಶಸ್ತಿಗಳಿಗೆ ಕೇಂದ್ರ ಸರ್ಕಾರದಇಂದಿರಾಗಾಂಧಿಎನ್.ಎಸ್.ಎಸ್. ರಾಷ್ಟ್ರ ಪ್ರಶಸ್ತಿಯ ಮಾನದಂಡಗಳನ್ನು ಬಳಸಲಾಗುವುದು.
3. ಕಾಲೇಜುಗಳ ಸ್ವಯಂ ಸೇವಕ/ಸೇವಕಿಯರ ಪ್ರಸ್ತಾವನೆ ಕಳುಹಿಸುವಾಗ ಎನ್.ಎಸ್.ಎಸ್. ನಲ್ಲಿ 2 ವರ್ಷ ಪೂರೈಸಿರುವ ವಿದ್ಯಾರ್ಥಿಗಳ ಪ್ರಸ್ತಾವನೆಗಳನ್ನು ಮಾತ್ರ ಕಳುಹಿಸಬೇಕು.
4. ಅತ್ಯುತ್ತಮಘಟಕ ಪ್ರಶಸ್ತಿಗಳಿಗಾಗಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸಂದರ್ಶನವನ್ನು ನಡೆಸಲಾಗುವುದು ಹಾಗೂ ಘಟಕಗಳಿಗೆ ಭೇಟಿ ನೀಡಿಕಾರ್ಯಯೋಜನೆಯನ್ನು ಪರಿಸೀಲಿಸಲಾಗುವುದು.

5. ಪ್ರಶಸ್ತಿಗಳಿಗೆ ಪ್ರಸ್ತಾವನೆಗಳನ್ನು ಕಳುಹಿಸಲು ನಿಗದಿತ ನಮೂನೆಗಳನ್ನು ಇಲಾಖೆಯ ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿದೆ.
6. ಸ್ವಯಂ ಸೇವಕರು ಪ್ರಸ್ತಾವನೆಗಳೊಂದಿಗೆ ತಮ್ಮ ಭಾವಚಿತ್ರವನ್ನುಕಡ್ಡಾಯವಾಗಿ ಲಗತ್ತಿಸತಕ್ಕದ್ದು.
7. ಕಾಲೇಜುಗಳ ಪ್ರಸ್ತಾವನೆಗಳನ್ನು ಕಳುಹಿಸುವಾಗ ಪ್ರಾಂಶುಪಾಲರು ಮತ್ತು ಕಾರ್ಯಕ್ರಮಾಧಿಕಾರಿಗಳ ಭಾವಚಿತ್ರಗಳನ್ನು ಕಡ್ಡಾಯವಾಗಿ ಲಗತ್ತಿಸುವುದು.
8. ಪ್ರಸ್ತಾವನೆಯೊಂದಿಗೆ ಮಾರ್ಗದರ್ಶಿ ಸೂತ್ರದಲ್ಲಿರುವ ನಿಗದಿತ ನಮೂನೆಯಲ್ಲಿಚೆಕ್‌ಲಿಸ್ಟ್‌ನ್ನುಕಡ್ಡಾಯವಾಗಿ ಕಳುಹಿಸಬೇಕು. ಚೆಕ್‌ಲಿಸ್ಟ್‌ನ್ನು ಪ್ರತ್ಯೇಕವಾಗಿ ಕಳುಹಿಸಬೇಕು ಪ್ರಸ್ತಾವನೆಗೆ ಸೇರಿಸಬಾರದು.
9. ಇಂದಿರಾಗಾಂಧಿರಾಷ್ಟ್ರ ಪ್ರಶಸ್ತಿಗಾಗಿ ಪ್ರಸ್ತಾವನೆಯನ್ನುಇಂಗ್ಲೀಷ್/ಹಿಂದಿ ಭಾಷೆಯಲ್ಲಿ ನೀಡುವುದು.
10. ಪ್ರಸ್ತಾವನೆಯುಒಟ್ಟು 100 ಪುಟಗಳಿಗೆ ಮೀರದಂತೆ (ಭಾವಚಿತ್ರಗಳನ್ನು ಒಳಗೊಂಡಂತೆ) ನೀಡುವುದು.
11. ಪ್ರಸ್ತಾವನೆಗಳನ್ನು ದಿನಾಂಕ:25/11/2020ರ ಒಳಗಾಗಿ ರಾಜ್ಯಸಂಯೋಜನಾಧಿಕಾರಿಗಳು, ಕೇಂದ್ರಕಛೇರಿ, ಎನ್.ಎಸ್.ಎಸ್ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ ಬೆಂಗಳೂರು ಇಲ್ಲಿಗೆ ಮುದ್ದಾಂ ಆಗಿ ಅಥವಾ ನೊಂದಾಯಿತ ಅಂಚೆ ಮೂಲಕ ಕಳುಹಿಸಲು ಕೋರಿದೆ.
12. ದಿನಾಂಕ:26/11/2020ರ ನಂತರ ಪ್ರಶಸ್ತಿಗೆ ಬರುವ ಪ್ರಸ್ತಾವನೆಗಳನ್ನು ಮತ್ತುಅಪೂರ್ಣ ಮಾಹಿತಿಇರುವ ಪ್ರಸ್ತಾವನೆಗಳನ್ನು ಪ್ರಶಸ್ತಿಗಾಗಿ ಪರಿಗಣಿಸಲಾಗುವುದಿಲ್ಲ.

ಪ್ರಸ್ತಾವನೆಗಳನ್ನು ಕಳುಹಿಸುವಾಗ ಮೇಲಿನ ನಿಬಂದನೆಗಳನ್ನು ಅನುಸರಿಸಲಾಗಿದೆಯೇ ಎಂಬುದನ್ನು ಪ್ರಾಂಶುಪಾಲರು ಖಚಿತಪಡಿಸಿಕೊಂಡು ಪ್ರಸ್ತಾವನೆಗಳನ್ನು ಕಳುಹಿಸಬೇಕು. ಈ ಬಗ್ಗೆ ಯಾವುದೇ ಮಾಹಿತಿ ಅಗತ್ಯವಿದ್ದಲ್ಲಿ ರಾಜ್ಯ ಎನ್.ಎಸ್.ಎಸ್. ಅಧಿಕಾರಿಗಳು (ಡಾ. ರಮೇಶ್ ಸಿ.ಜಿ ಮೊಬೈಲ್ ಸಂಖ್ಯೆ:9606225449)ಸಂಪರ್ಕಿಸಬಹುದಾಗಿದೆ. ಪ್ರಾಂಶುಪಾಲರುಗಳು ಹೆಚ್ಚಿನ ಮುತುವರ್ಜಿ ವಹಿಸಿ ತಮ್ಮ ಕಾಲೇಜುಗಳಿಗೆ ಅತ್ಯುತ್ತಮಘಟಕ, ಯೋಜನಾಧಿಕಾರಿ, ಸ್ವಯಂ ಸೇವಕ/ಸ್ವಯಂ ಸೇವಕಿಯರಿಗೆ ಪ್ರಶಸ್ತಿಗೆ ಅರ್ಜಿಸಲ್ಲಿಸಲು ಸಹಕರಿಸಲು ಕೋರಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

(ಡಾ. ರಮೇಶ್ ಸಿ.ಜಿ)
ರಾಜ್ಯ ಸಂಯೋಜನಾಧಿಕಾರಿಗಳು
ರಾಷ್ಟ್ರೀಯಸೇವಾಯೋಜನೆ
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ, ಬೆಂಗಳೂರು.

ಪ್ರತಿ:

1. ಶ್ರೀ ಕೆ ವಿ ಖಾದ್ರಿ ನರಸಿಂಹಯ್ಯ , ಪ್ರಾಂತಿಯ ನಿರ್ದೇಶಕರು, ಪ್ರಾಂತೀಯ ಕೇಂದ್ರ ಬಸವನಗುಡಿ ಬೆಂಗಳೂರು.
2. ಶ್ರೀ ಡಾ: ಗಣನಾಥ ಶೆಟ್ಟಿ ,ರಾಜ್ಯ ಎನ್.ಎಸ್.ಎಸ್ ಅಧಿಕಾರಿಗಳು ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಎನ್.ಎಸ್.ಎಸ್ ಕೋಶ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
3. ಸಹಾಯಕ ನಿರ್ದೇಶಕರು, ಇ ಗರ್ವನೆಸ್ ರವರಿಗೆ ಇಲಾಖೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
4. ಕಛೇರಿ ಪ್ರತಿ.